ಕರ್ನಾಟಕ ಸರ್ಕಾರ

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತಿ ರಾಜ್ ಇಲಾಖೆ

# ಗಾಂಧಿ ಗ್ರಾಮ ಪುರಸ್ಕಾರ

# 2018-19

ಪ್ರಶ್ನಾವಳಿಗಳು

# ಗಾಂಧಿ ಗ್ರಾಮ ಪುರಸ್ಕಾರ

## ಪ್ರಶ್ನಾವಳಿಗಳು

**1ನೇ ಏಪ್ರಿಲ್ 2018 ರಿಂದ 31ನೇ ಮಾರ್ಚ್ 2019ರ ಅವಧಿ**

## ಒಟ್ಟು ಅಂಕಗಳು: 150

**ವಿಭಾಗ 1- ಹಣಕಾಸಿನ ನಿರ್ವಹಣೆ/ವಿನೂತನ ಪ್ರಯೋಗಗಳು**

| ಸ್ವಂತ ಸಂಪನ್ಮೂಲಗಳ ಕ್ರೋಢೀಕರಣ (12 ಅಂಕಗಳು) | | |
|---|---|---|
| ಕ್ರ.ಸಂ | ಮಾನದಂಡಗಳು | ಅಂಕಗಳು |
| 1 | ಗ್ರಾಮ ಪಂಚಾಯತಿಯ ತೆರಿಗೆ ವಾರ್ಷಿಕ ಬೇಡಿಕೆಯ(2018-19) ಗುರಿ ಸಾಧನೆ:<br>(ಗರಿಷ್ಠ ಅಂಕಗಳು-4) | ಶೇ.100ರಷ್ಟು -4<br>ಶೇ.80%- 3<br>ಶೇ.60%-2<br>ಶೇ.60ಕ್ಕಿಂತ ಕಡಿಮೆ-1 |
| 2 | 2018-19ರ ತೆರಿಗೆ ವಸೂಲಾತಿಯು 2017-18ರ ತೆರಿಗೆ ವಸೂಲಾತಿಗೆ ಹೋಲಿಸಿದರೆ ಹೆಚ್ಚಳವಾಗಿದೆಯೇ?<br>(ಗರಿಷ್ಠ ಅಂಕಗಳು-2) | ಹೌದಾದರೆ- 2 ಅಂಕಗಳು<br>ಇಲ್ಲ- 0 |
| 3 | 2018-19ರ ಹಿಂದಿನ ವರ್ಷಗಳ ತೆರಿಗೆ ಬಾಕಿಯು ಪೂರ್ಣ ವಸೂಲಾಗಿದೆಯೇ?<br>(ಗರಿಷ್ಠ ಅಂಕಗಳು-3) | ಹೌದಾದರೆ- 3 ಅಂಕಗಳು<br>ಇಲ್ಲ- 0 |
| 4 | ಕರ್ನಾಟಕ ಗ್ರಾಮಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ (2ನೇ ತಿದ್ದುಪಡಿ)2015ರ ಅನುಸೂಚಿ-4ರ ಅನ್ವಯ, ಆಸ್ತಿಗಳ ತೆರಿಗೆಗಳ ಪರಿಷ್ಕರಿಸಲಾಗಿದೆಯೇ? ಹೌದಾದರೆ<br>(ಗರಿಷ್ಠ ಅಂಕಗಳು-3) | ಹೌದಾದರೆ- 3 ಅಂಕಗಳು<br>ಇಲ್ಲ- 0 |

| | | |
|---|---|---|
| **ಹದಿನಾಲ್ಕನೇ ಹಣಕಾಸು ಆಯೋಗ (5 ಅಂಕಗಳು)** | | |
| 5 | 14ನೇ ಹಣಕಾಸು ಆಯೋಗದ ಅನುದಾನದ ಅಡಿಯಲ್ಲಿ ಬಿಡುಗಡೆಯಾದ ಅನುದಾನದ ಪೂರ್ಣ ಬಳಕೆ ಮಾಡಲಾಗಿದೆಯೇ? (ಕ್ರಿಯಾಯೋಜನೆ ಮತ್ತು ಮಾರ್ಗಸೂಚಿಗಳಿಗನುಗುಣವಾಗಿ) (ಗರಿಷ್ಠ ಅಂಕಗಳು-3) | ಶೇ.100 -3<br><br>ಕಡಿಮೆ ಇದ್ದರೆ-2 |
| 6 | 14ನೇ ಹಣಕಾಸು ಆಯೋಗದ ಅನುದಾನದ ಅಡಿಯಲ್ಲಿ ಕಾರ್ಯಕ್ಷಮತೆ ಅನುದಾನ ಪಡೆಯಲಾಗಿದೆಯೇ? ಹೌದಾದರೆ (ಗರಿಷ್ಠ ಅಂಕಗಳು-2) | ಹೌದಾದರೆ- 2 ಅಂಕಗಳು<br><br>ಇಲ್ಲ- 0 |
| **ಅನುದಾನಗಳ ಬಳಕೆ (6 ಅಂಕಗಳು)** | | |
| 7 | ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದವರ ಕಲ್ಯಾಣಕ್ಕಾಗಿ ಮೀಸಲಿರಿಸಿದ ಅನುದಾನ ಬಳಕೆ:<br><br>(ಗರಿಷ್ಠ ಅಂಕಗಳು-2) | ಶೇ.100ರಷ್ಟು -2<br><br>ಶೇ.50ಕ್ಕಿಂತ ಹೆಚ್ಚು -1<br><br>50ಕ್ಕಿಂತ ಕಡಿಮೆ -0 |
| 8 | ಅಂಗವಿಕಲರ ಕಲ್ಯಾಣಕ್ಕಾಗಿ ಮೀಸಲಿರಿಸಿದ ಅನುದಾನದ ಬಳಕೆ:<br><br>(ಗರಿಷ್ಠ ಅಂಕಗಳು-2) | ಶೇ.100ರಷ್ಟು -2<br><br>ಶೇ.50ಕ್ಕಿಂತ ಹೆಚ್ಚು -1<br><br>50ಕ್ಕಿಂತ ಕಡಿಮೆ -0 |
| 9 | ಕ್ರೀಡಾ ಚಟುವಟಿಕೆಗಳಿಗೆ ಮೀಸಲಿರಿಸಿದ ಅನುದಾನದ ಬಳಕೆ:<br>(ಗರಿಷ್ಠ ಅಂಕಗಳು-2) | ಶೇ.100ರಷ್ಟು -2<br><br>ಶೇ.50ಕ್ಕಿಂತ ಹೆಚ್ಚು -1<br><br>50ಕ್ಕಿಂತ ಕಡಿಮೆ -0 |

| | | |
|---|---|---|
| **ಜಮಾಬಂಧಿ (2 ಅಂಕಗಳು)** | | |
| 10 | ಕಗ್ರಾಪಂರಾಜ್ (ಪಂಚಾಯತ್ ಜಮಾಬಂದಿ ನಿರ್ವಹಣೆ) ನಿಯಮಗಳು 2004 ಪ್ರಕಾರ ಜಮಾಬಂದಿ ನಡೆಸಲಾಗಿದೆಯೇ?<br>(ಗರಿಷ್ಠ ಅಂಕಗಳು-2) | ಹೌದಾದರೆ- 2 ಅಂಕಗಳು<br><br>ಇಲ್ಲ- 0 |
| **ಎಮ್‌ಜಿಎನ್‌ಆರ್‌ಇಜಿಎಸ್ (MGNREGS) (14 ಅಂಕಗಳು)** | | |
| 11 | ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅಡಿ ಎಲ್ಲಾ ಅರ್ಹ ಕುಟುಂಬಗಳಿಗೂ ಜಾಬ್ ಕಾರ್ಡ್ ನೀಡಲಾಗಿದೆಯೇ?<br>(ಗರಿಷ್ಠ ಅಂಕಗಳು-2) | ಹೌದಾದರೆ-2<br><br>ಕಡಿಮೆ ಇದ್ದರೆ -1<br><br>ಯಾರಿಗೂ ನೀಡದಿದ್ದರೆ-0 |
| 12 | ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅಡಿ ಬೇಡಿಕೆ ಸಲ್ಲಿಸಿದ ಎಲ್ಲಾ ನೊಂದಾಯಿತ ಕುಟುಂಬಗಳಿಗೆ ಉದ್ಯೋಗ ನೀಡಲಾಗಿದೆಯೇ?(ಎಂಐಎಸ್ ವರದಿ ಆಧಾರಿತ)<br>(ಗರಿಷ್ಠ ಅಂಕಗಳು-2) | ಹೌದಾದರೆ-2<br><br>ಭಾಗಶಃ ನೀಡಿದ್ದರೆ-1<br><br>ಯಾರಿಗೂ ನೀಡದಿದ್ದರೆ-0 |
| 13 | ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅಡಿ ಗ್ರಾಮ ಪಂಚಾಯತಿಗೆ ನಿಗಧಿಪಡಿಸಿದ ಮಾನವ ದಿನಗಳಿಗೆ ಎದುರಾಗಿ ಸಾಧಿಸಿದ ಪ್ರಗತಿ:<br>(ಗರಿಷ್ಠ ಅಂಕಗಳು-3) | 100 ಅಥವಾ ಹೆಚ್ಚು ದಿನಗಳು-3 ಅಂಕಗಳು<br><br>ಶೇ.60ಕ್ಕಿಂತ ಹೆಚ್ಚಿನ ದಿನಗಳು-2<br><br>ಶೇ.60ಕ್ಕಿಂತ ಕಡಿಮೆ-1 |

| | | |
|---|---|---|
| 14 | ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಸೆಕ್ಷನ್ 3(3)ರ ಅಡಿಯಲ್ಲಿ ಕೆಲಸ ನಿರ್ವಹಿಸಿದ ಕೂಲಿ ಕಾರ್ಮಿಕರಿಗೆ ಸಕಾಲದಲ್ಲಿ ಕೂಲಿ ಪಾವತಿ ಮಾಡಲಾಗಿದೆಯೇ(ಎಫ್‌ಟಿಓ ಜನರೇಟ್)?<br>(ಗರಿಷ್ಠ ಅಂಕಗಳು-2) | ಹೌದಾದರೆ-2<br><br>ಸಕಾಲದಲ್ಲಿ ಮಾಡದಿದ್ದರೆ-1 |
| 15 | ಎಮ್‌ಜಿಎನ್‌ಆರ್‌ಇಜಿಎಸ್‌ನ ನಿಧಿಯಿಂದ ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆಗೆ ಶೇ.65ರಷ್ಟು ಆರ್ಥಿಕ ವೆಚ್ಚ ಸದರಿ ಸಾಲಿನಲ್ಲಿ ಬಳಕೆಯಾಗಿದೆಯೇ?<br>(ಗರಿಷ್ಠ ಅಂಕಗಳು-2) | ಹೌದಾದರೆ-2<br><br>ಶೇ.50ರಷ್ಟು ಬಳಸಿದ್ದರೆ-1<br><br>ಇಲ್ಲವಾದರೆ-0 |
| 16 | (ಎ) ಕೇಂದ್ರ ಸರ್ಕಾರವು ನಿಗದಿಪಡಿಸಿದ 27(2)ರ ಕಾಯ್ದೆಯ ಸೆಕ್ಷನ್ ಅಡಿಯ ನಿಯಮಗಳಲ್ಲಿ ಸಾಮಾಜಿಕ ಪರಿಶೋಧನೆಯನ್ನು ನಡೆಸಲಾಗಿದೆಯೇ? ಹೌದಾದರೆ<br>(ಗರಿಷ್ಠ ಅಂಕಗಳು-2) | ಹೌದಾದರೆ-2<br><br>ಇಲ್ಲವಾದರೆ-0 |
| | (ಬಿ) ಹಿಂದಿನ ಸಾಮಾಜಿಕ ಪರಿಶೋಧನೆಯಲ್ಲಿ ಗುರುತಿಸಲಾದ ಅಂಶಗಳಿಗೆ ಅನುಪಾಲನಾ ವರದಿ ಸಲ್ಲಿಸಲಾಗಿದೆಯೇ? ಹೌದಾದರೆ<br>(ಗರಿಷ್ಠ ಅಂಕಗಳು-1) | ಹೌದಾದರೆ-1<br><br>ಇಲ್ಲವಾದರೆ-0 |

## ವಿಭಾಗ-2- ಮೂಲಸೌಕರ್ಯಗಳು

| ಕ್ರ.ಸಂ | ಮಾನದಂಡಗಳು | ಅಂಕಗಳು |
|---|---|---|
| **ಕುಡಿಯುವ ನೀರು (5 ಅಂಕಗಳು)** | | |
| 17 | ಗ್ರಾಮದ ಎಲ್ಲಾ ಮನೆಗಳಿಗೆ ಶುದ್ಧ ಮತ್ತು ಸುರಕ್ಷಿತ ಕುಡಿಯುವ ನೀರನ್ನು ಒದಗಿಸಲಾಗುತ್ತಿದೆಯೇ? ಹೌದಾದರೆ<br>(ಗರಿಷ್ಠ ಅಂಕಗಳು-3) | ಹೌದಾದರೆ-3<br>ಭಾಗಶಃ-2<br>ಇಲ್ಲವಾದರೆ-0 |
| 18 | ಗ್ರಾಮದ ಎಲ್ಲಾ ಮನೆಗಳಿಗೆ ನಲ್ಲಿಗಳ ಮೂಲಕ ಕುಡಿಯುವ ನೀರು ಸರಬರಾಜು ವ್ಯವಸ್ಥೆ ಒದಗಿಸಲಾಗಿದೆಯೇ? ಹೌದಾದರೆ<br>(ಗರಿಷ್ಠ ಅಂಕಗಳು-2) | ಹೌದಾದರೆ-2<br>ಭಾಗಶಃ-1<br>ಇಲ್ಲವಾದರೆ-0 |
| **ಬೀದಿ ದೀಪ (6 ಅಂಕಗಳು)** | | |
| 19 | ನಿಮ್ಮ ಗ್ರಾಮ ಪಂಚಾಯತಿಯ ಪ್ರತಿ ಹಳ್ಳಿಯಲ್ಲಿ ಪ್ರತಿ ಬೀದಿಯಲ್ಲಿ ಅಗತ್ಯವಿರುವಷ್ಟು ಬೀದಿ ದೀಪಗಳಿವಿಯೇ?<br>(ಗರಿಷ್ಠ ಅಂಕಗಳು-3) | ಇದ್ದಲ್ಲಿ-3<br>ಅಸಮರ್ಪಕವಿದ್ದಲ್ಲಿ-2 |
| 20 | ಬೀದಿ ದೀಪಗಳ ನಿರ್ವಹಣೆಗೆ ಸಮರ್ಪಕ ವ್ಯವಸ್ಥೆ ಮಾಡಲಾಗಿದೆಯೇ? ಹೌದಾದರೆ<br>(ಗರಿಷ್ಠ ಅಂಕಗಳು-2) | ಹೌದಾದರೆ-2<br>ಇಲ್ಲವಾದರೆ-0 |
| 21 | ಬೀದಿ ದೀಪಗಳ ಸ್ವಿಚ್ ಆಫ್ ಮತ್ತು ಸ್ವಿಚ್ ಆನ್‌ಗಳಿಗೆ ಸ್ವಯಂಚಾಲಿತ ವ್ಯವಸ್ಥೆ ಮಾಡಲಾಗಿದೆಯೇ?<br>(ಗರಿಷ್ಠ ಅಂಕಗಳು-1) | ಹೌದಾದರೆ-1<br>ಇಲ್ಲ-0 |

| ವಸತಿ ಯೋಜನೆ (5 ಅಂಕಗಳು) | | |
|---|---|---|
| 22 | ವಸತಿ ಯೋಜನೆಗೆ ಫಲಾನುಭವಿಗಳ ಆಯ್ಕೆಯನ್ನು ನಿಯಾಮಾನುಸಾರ ಗ್ರಾಮ ಸಭೆಯ ಮೂಲಕ ಆಯ್ಕೆ ಮಾಡಲಾಗಿದೆಯೇ?<br>(ಗರಿಷ್ಠ ಅಂಕಗಳು-2) | ಹೌದಾದರೆ-2<br>ಇಲ್ಲವಾದರೆ-0 |
| 23 | ವಸತಿ ಯೋಜನೆ ಅಡಿ ಮಂಜೂರಾದ ಮನೆಗಳ ನಿರ್ಮಾಣದ ಗುರಿ ಸಾಧನೆ<br>(ಗರಿಷ್ಠ ಅಂಕಗಳು-3) | ಶೇ.100- 3<br>ಭಾಗಶಃ- 2 |
| **ನೈರ್ಮಲ್ಯೀಕರಣ (13 ಅಂಕಗಳು)** | | |
| 24 | ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಮನೆಗಳಿಗೂ  ವೈಯಕ್ತಿಕ ಶೌಚಾಲಯಗಳ ನಿರ್ಮಾಣವಾಗಿದೆಯೇ?<br>(ಗರಿಷ್ಠ ಅಂಕಗಳು-3) | ಆಗಿದ್ದಲ್ಲಿ-3<br>ಭಾಗಶಃ-2 |
| 25 | ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಬರುವ ಮನೆಗಳ ವೈಯಕ್ತಿಕ ಶೌಚಾಲಯಗಳು ಪೂರ್ಣವಾಗಿ ಬಳಕೆಯಲ್ಲಿವೆಯೇ?<br>(ಗರಿಷ್ಠ ಅಂಕಗಳು-2) | ಇದ್ದಲ್ಲಿ-2<br>ಇಲ್ಲವಾದಲ್ಲಿ-0 |
| 26 | ಗ್ರಾಮ ಪಂಚಾಯತಿ ವ್ಯಾಪ್ತಿಯ ಸಾರ್ವಜನಿಕ ಸ್ಥಳಗಳಲ್ಲಿ ಸಮುದಾಯ ಶೌಚಾಲಯಗಳ ವ್ಯವಸ್ಥೆ ಇದೆಯೇ?<br>(ಗರಿಷ್ಠ ಅಂಕಗಳು-2) | ಇದ್ದಲ್ಲಿ-2<br>ಇಲ್ಲವಾದಲ್ಲಿ-0 |
| 27 | ಗ್ರಾಮ ಪಂಚಾಯತಿ ವ್ಯಾಪ್ತಿಯ ಸಾರ್ವಜನಿಕ ಸ್ಥಳಗಳಲ್ಲಿರುವ ಸಮುದಾಯ ಶೌಚಾಲಯಗಳ ನಿರ್ವಹಣೆಗೆ ಸಮರ್ಪಕ ವ್ಯವಸ್ಥೆ ಇದೆಯೇ<br>(ಗರಿಷ್ಠ ಅಂಕಗಳು-2) | ಇದ್ದಲ್ಲಿ-2<br>ಇಲ್ಲವಾದಲ್ಲಿ-0 |

| | | |
|---|---|---|
| 28 | ಗ್ರಾಮಗಳ ವ್ಯಾಪ್ತಿಯಲ್ಲಿ ಪಂಚಾಯತಿಯು ಸಮರ್ಪ ಚರಂಡಿಗಳ ನಿರ್ಮಾಣ ಕಾರ್ಯವನ್ನು ವ್ಯವಸ್ಥೆ ಮಾಡಿದೆಯೇ?<br>(ಗರಿಷ್ಠ ಅಂಕಗಳು-2) | ಮಾಡಿದ್ದಲ್ಲಿ-2<br>ಇಲ್ಲವಾದಲ್ಲಿ-0 |
| 29 | ಗ್ರಾಮಗಳ ವ್ಯಾಪ್ತಿಯಲ್ಲಿ ಪಂಚಾಯತಿಯು ಚರಂಡಿಗಳ ನಿರ್ವಹಣೆ ಕಾರ್ಯವನ್ನು ಮಾಡಲಾಗುತ್ತಿದೆಯೇ?<br>(ಗರಿಷ್ಠ ಅಂಕಗಳು-2) | ಮಾಡಿದ್ದಲ್ಲಿ-2<br>ಇಲ್ಲವಾದಲ್ಲಿ-0 |
| **ತ್ಯಾಜ್ಯ ನಿರ್ವಹಣೆ (7 ಅಂಕಗಳು)** | | |
| 30 | ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಒಣ ಕಸವನ್ನು ನಿಯಮಿತವಾಗಿ ಸಂಗ್ರಹಿಸುವ, ಸಂಸ್ಕರಿಸುವ ಹಾಗೂ ವಿಲೇವಾರಿ ಮಾಡುವ ವ್ಯವಸ್ಥೆ ಇದೆಯೇ?<br>(ಗರಿಷ್ಠ ಅಂಕಗಳು-3) | ಇದ್ದಲ್ಲಿ-3<br>ಇಲ್ಲ-0 |
| 31 | ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಕ್ರಮ ಸಂಖ್ಯೆ 30ರ ವ್ಯವಸ್ಥೆ ಇಲ್ಲದಿದ್ದಲ್ಲಿ ಒಣಕಸವನ್ನು ನಿಯಮಿತವಾಗಿ ಸಂಗ್ರಹಿಸಲಾಗುತ್ತಿದೆಯೇ?<br>(ಗರಿಷ್ಠ ಅಂಕಗಳು-2) | ಇದ್ದಲ್ಲಿ-2<br>ಇಲ್ಲ-0 |
| 32 | ಪ್ರತಿ ಹಳ್ಳಿಯ ಬೀದಿಗಳಿಂದ ಹಸಿ ಕಸದ ನಿರ್ವಹಣೆ ಮಾಡಲಾಗುತ್ತಿದೆಯೇ?<br>(ಗರಿಷ್ಠ ಅಂಕಗಳು-2) | ಹೌದು-2<br>ಇಲ್ಲ-0 |

**ವಿಭಾಗ: 3- ಉತ್ತಮ ಆಡಳಿತ**

| ಗ್ರಾಮ ಪಂಚಾಯಿತಿ ಅಭಿವೃದ್ಧಿ ಯೋಜನೆ (ನಮ್ಮ ಗ್ರಾಮ ನಮ್ಮ ಯೋಜನೆ) (8 ಅಂಕಗಳು) | | |
|---|---|---|
| **ಕ್ರ.ಸಂ** | **ಮಾನದಂಡಗಳು** | **ಅಂಕಗಳು** |
| 33 | ಗ್ರಾಮ ಪಂಚಾಯಿತಿಯು 5 ವರ್ಷದ (ದೂರದೃಷ್ಟಿ) ಯೋಜನೆಯನ್ನು ತಯಾರಿಸಲಾಗಿದೆಯೇ? (ಗರಿಷ್ಠ ಅಂಕಗಳು-2) | ಹೌದಾದರೆ-2<br>ಇಲ್ಲವಾದರೆ-0 |
| 34 | ಈ ಯೋಜನೆಯನ್ನು ಪ್ಲಾನ್ ಪ್ಲಸ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆಯೇ? (ಗರಿಷ್ಠ ಅಂಕಗಳು-2) | ಹೌದಾದರೆ-2<br>ಇಲ್ಲವಾದರೆ-0 |
| 35 | ಯೋಜನೆಯ ಅನುಷ್ಠಾನದ ಪ್ಲಾನ್‌ನ್ನು 'ಗಾಂಧಿ ಸಾಕ್ಷಿ ಕಾಯಕ' ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡಲಾಗಿದೆಯೇ? (ಗರಿಷ್ಠ ಅಂಕಗಳು-2) | ಪೂರ್ಣವಾಗಿ ಮಾಡಿದ್ದಲ್ಲಿ-2<br>ಭಾಗಶ:ವಾಗಿ ಮಾಡಿದ್ದಲ್ಲಿ-1 |
| 36 | ಯೋಜನೆಗಳ ವಾರ್ಷಿಕ ಕ್ರಿಯಾ ಯೋಜನೆಯನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡಲಾಗಿದೆಯೇ? (ಗರಿಷ್ಠ ಅಂಕಗಳು-2) | ಮಾಡಿದ್ದಲ್ಲಿ-2<br>ಇಲ್ಲವಾದಲ್ಲಿ-0 |
| **ವಾರ್ಡ್ ಸಭೆ/ಗ್ರಾಮ ಸಭೆ (2015ರ ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ಕಾಯ್ದೆಯ ತಿದ್ದುಪಡಿ (12 ಅಂಕಗಳು)** | | |
| 37 | ಕಗ್ರಾಸ್ವ/ಪಂರಾಜ್ ಕಾಯ್ದೆಗೆ ಅನುಗುಣವಾಗಿ ಸಾಮಾನ್ಯ ಗ್ರಾಮಸಭೆಗಳು 2 ಬಾರಿ ನಡೆದಿವೆಯೇ? ಹೌದಾದಲ್ಲಿ (ಗರಿಷ್ಠ ಅಂಕಗಳು-2) | ಹೌದಾದಲ್ಲಿ-2<br>ಇಲ್ಲವಾದಲ್ಲಿ-0 |
| 38 | ಕಗ್ರಾಸ್ವ/ಪಂರಾಜ್ ಕಾಯ್ದೆಗೆ ಅನುಗುಣವಾಗಿ ವಾರ್ಡ್ ಸಭೆಯನ್ನು ನಡೆಸಲಾಗಿದೆಯೇ? (ಗರಿಷ್ಠ ಅಂಕಗಳು-2) | ಹೌದಾದಲ್ಲಿ-2<br>ಇಲ್ಲವಾದಲ್ಲಿ-0 |

| | | |
|---|---|---|
| 39 | ಕಗ್ರಾಸ್ವ/ಪಂರಾಜ್ ಕಾಯ್ದೆಗೆ ಅನುಗುಣವಾಗಿ ಮಹಿಳೆಯರು ಹಾಗೂ ಮಕ್ಕಳಿಗಾಗಿ ವಿಶೇಷ ಗ್ರಾಮ ಸಭೆಗಳನ್ನು ನಡೆಸಲಾಗಿದೆಯೇ?<br>(ಗರಿಷ್ಠ ಅಂಕಗಳು -2) | ಹೌದಾದಲ್ಲಿ-2<br><br>ಇಲ್ಲವಾದಲ್ಲಿ-0 |
| 40 | ಗ್ರಾಮ ಸಭೆಗಳ ಚರ್ಚೆಗಳನ್ನು ವಿಡಿಯೋ ಚಿತ್ರೀಕರಿಸಿ ಅದನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡಲಾಗಿದೆಯೇ? ಹೌದಾದಲ್ಲಿ<br>(ಗರಿಷ್ಠ ಅಂಕಗಳು-2) | ಹೌದಾದಲ್ಲಿ-2<br><br>ಇಲ್ಲವಾದಲ್ಲಿ-0 |
| 41 | ಗ್ರಾಮ ಸಭೆಯ ನಡವಳಿಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡಲಾಗಿದೆಯೇ?<br>(ಗರಿಷ್ಠ ಅಂಕಗಳು-2) | ಹೌದಾದಲ್ಲಿ-2<br><br>ಇಲ್ಲವಾದಲ್ಲಿ-0 |
| 42 | ಗ್ರಾಮ ಸಭೆಯ ನಡವಳಿಗಳನ್ನು ಸಭೆ ನಡೆದ 3 ದಿನಗಳೊಳಗಾಗಿ ಗ್ರಾಮ ಪಂಚಾಯತಿಯ ಸೂಚನಾ ಫಲಕದಲ್ಲಿ ಪ್ರದರ್ಶಿಸಲಾಗಿದೆಯೇ?<br>(ಗರಿಷ್ಠ ಅಂಕಗಳು-2) | ಹೌದಾದಲ್ಲಿ-2<br><br>ಇಲ್ಲವಾದಲ್ಲಿ-0 |
| **ಗ್ರಾಮ ಪಂಚಾಯತಿ ಸಭೆಗಳು (4 ಅಂಕಗಳು)** | | |
| 43 | ಗ್ರಾಮ ಪಂಚಾಯತಿ ಸಭೆಗಳು ಪ್ರತಿ ಮಾಹೆ ನಡೆದಿವೆಯೇ?<br>(ಗರಿಷ್ಠ ಅಂಕಗಳು-3) | 12 ಸಭೆ ನಡೆದಿದ್ದರೆ-3 ಅಂಕಗಳು.<br><br>10ಕ್ಕಿಂತ ಕಡಿಮೆ ನಡೆದಿದ್ದರೆ-2 ಅಂಕಗಳು.<br><br>6 ಕ್ಕಿಂತ ಕಡಿಮೆ ನಡೆದಿದ್ದರೆ-1 ಅಂಕಗಳು. |

| | | |
|---|---|---|
| 44 | ಗ್ರಾಮ ಪಂಚಾಯತಿ ಸಭೆಗಳ ನಡವಳಿಗಳನ್ನು ಸೂಚನಾ ಫಲಕದಲ್ಲಿ ಹಾಗೂ ಪಂಚತಂತ್ರದಲ್ಲಿ 3 ದಿನಗಳೊಳಗಾಗಿ ಅಳವಡಿಸಿರುವರೇ? (ಪ್ರಕರಣ-55)<br><br>(ಗರಿಷ್ಠ ಅಂಕಗಳು-1) | ಹೌದಾದಲ್ಲಿ-1<br><br>ಇಲ್ಲವಾದಲ್ಲಿ-0 |
| **ಗ್ರಾಮ ಪಂಚಾಯತಿ ಸ್ಥಾಯಿ ಸಮಿತಿ ಸಭೆಗಳು (6 ಅಂಕಗಳು)** | | |
| 45 | ಗ್ರಾಮ ಪಂಚಾಯತಿ ಸ್ಥಾಯಿ ಸಮಿತಿಗಳು ನಿಯಮಿತವಾಗಿ ನಡೆಯುತ್ತಿವೆಯೇ?<br>(ಗರಿಷ್ಠ ಅಂಕಗಳು-3) | ಹೌದಾದ್ದಲ್ಲಿ-3<br><br>ಇಲ್ಲವಾದಲ್ಲಿ-0 |
| 46 | ಸ್ಥಾಯಿ ಸಮಿತಿ ಸಭೆಗಳ ನಡೆವಳಿಗಳನ್ನು ಗ್ರಾಮ ಪಂಚಾಯತ್ ಸಭೆಗಳಲ್ಲಿ ಮಂಡಿಸಲಾಗುತ್ತಿದೆಯೇ?<br>(ಗರಿಷ್ಠ ಅಂಕಗಳು-1) | ಹೌದಾದ್ದಲ್ಲಿ-1<br><br>ಇಲ್ಲವಾದಲ್ಲಿ-0 |
| 47 | ಗ್ರಾಮ ಪಂಚಾಯತಿ ಆಡಳಿತಕ್ಕೆ ಪೂರಕವಾಗಿ ಪ್ರಕರಣ 61ಎ ಅಡಿ ಇತರೆ ಸಮಿತಿಗಳನ್ನು ರಚಿಸಲಾಗಿದೆಯೇ?<br>(ಗರಿಷ್ಠ ಅಂಕಗಳು-1) | ಹೌದಾದ್ದಲ್ಲಿ-1<br><br>ಇಲ್ಲವಾದಲ್ಲಿ-0 |
| 48 | ಈ ಸಮಿತಿಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿವೆಯೇ?<br>(ಗರಿಷ್ಠ ಅಂಕಗಳು -1) | ಹೌದಾದ್ದಲ್ಲಿ-1<br><br>ಇಲ್ಲವಾದಲ್ಲಿ-0 |
| **ಗ್ರಾಮ ಪಂಚಾಯತಿ ಸಕಾಲ ಸೇವೆಗಳು (3 ಅಂಕಗಳು)** | | |
| 49 | ಗ್ರಾಮ ಪಂಚಾಯತಿಯು ಸಕಾಲದಡಿ ಗುರುತಿಸಿರುವ ಸೇವೆಗಳನ್ನು ಒದಗಿಸುತ್ತಿವೆಯೇ?<br>(ಗರಿಷ್ಠ ಅಂಕಗಳು-2) | ಹೌದಾದಲ್ಲಿ-2<br><br>ಇಲ್ಲವಾದಲ್ಲಿ-0 |
| 50 | ಸಕಾಲದಡಿ ಲಭ್ಯವಾಗುವ ಸೇವೆಗಳ ಬಗ್ಗೆ ಸಾರ್ವಜನಿಕರಿಗೆ ಮಾಹಿತಿಯನ್ನು ಪ್ರಚುರಪಡಿಸಲಾಗಿದೆಯೇ?<br>(ಗರಿಷ್ಠ ಅಂಕಗಳು-1) | ಹೌದಾದಲ್ಲಿ-1<br><br>ಇಲ್ಲವಾದಲ್ಲಿ-0 |

| | | |
|---|---|---|
| **ಮಾಹಿತಿ ಹಕ್ಕು ಅಧಿನಿಯಮದ ಗ್ರಾಮ ಪಂಚಾಯತಿ ಸೇವೆಗಳು (3 ಅಂಕಗಳು)** | | |
| 51 | ಗ್ರಾಮ ಪಂಚಾಯತಿ ಮಾಹಿತಿ ಅಧಿಕಾರಿಗಳ ವಿವರಗಳನ್ನು ಗ್ರಾಮ ಪಂಚಾಯತಿ ಪ್ರಕಟಣಾ ಫಲಕದಲ್ಲಿ ಪ್ರದರ್ಶಿಸಲಾಗಿದೆಯೇ?<br>(ಗರಿಷ್ಠ ಅಂಕಗಳು-1) | ಪ್ರದರ್ಶಿಸಿದ್ದಲ್ಲಿ-1<br><br>ಇಲ್ಲವಾದಲ್ಲಿ-0 |
| 52 | ಗ್ರಾಮ ಪಂಚಾಯತಿಯಲ್ಲಿ ಮಾಹಿತಿ ಹಕ್ಕು ಅಧಿನಿಯಮ 2005ರಡಿ ಸಲ್ಲಿಸಲ್ಪಡುವ ಅರ್ಜಿಗಳಿಗೆ ಮಾಹಿತಿಗಳನ್ನು ನೀಡಲಾಗುತ್ತಿದೆಯೇ?<br>(ಗರಿಷ್ಠ ಅಂಕಗಳು-2) | ನೀಡುತ್ತಿದ್ದಲ್ಲಿ-2<br><br>ಇಲ್ಲವಾದಲ್ಲಿ-0 |
| **ಗ್ರಾಮ ಪಂಚಾಯತಿ ಹಣಕಾಸು ನಿರ್ವಹಣೆ (5 ಅಂಕಗಳು)** | | |
| 53 | ಗ್ರಾಮ ಪಂಚಾಯತಿಯ ಎಲ್ಲಾ ಹಣಕಾಸು ನಿರ್ವಹಣೆ (ಸ್ವೀಕೃತಿ ಮತ್ತು ವೆಚ್ಚ) ಮತ್ತು ಪ್ರಮುಖ ಆಡಳಿತಾತ್ಮಕ ವಿಷಯಗಳನ್ನು ಪ್ರತಿದಿನ ಪಂಚತಂತ್ರ ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡಲಾಗಿದೆಯೇ?<br>(ಗರಿಷ್ಠ ಅಂಕಗಳು-1) | ಹೌದಾದಲ್ಲಿ-1<br><br>ಇಲ್ಲವಾದಲ್ಲಿ-0 |
| 54 | ಶಾಸನಬದ್ಧ ಅನುದಾನ, 14ನೇ ಹಣಕಾಸು ಆಯೋಗದ ಅನುದಾನ, ಸ್ವಂತ ಸಂಪನ್ಮೂಲ ಅನುದಾನ ಹಾಗೂ ಇನ್ನಿತರ ಯೋಜನೆಗಳ ಅಡಿ ಬಿಡುಗಡೆಯಾದ ಅನುದಾನಗಳ ವಿವರಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ಪ್ರತಿ ತಿಂಗಳು ಬಿಆರ್‌ಎಸ್ ಮಾಡಲಾಗುತ್ತಿದೆಯೇ?<br>(ಗರಿಷ್ಠ ಅಂಕಗಳು-1) | ಹೌದಾದಲ್ಲಿ-1<br><br>ಇಲ್ಲವಾದಲ್ಲಿ-0 |
| 55 | 14ನೇ ಹಣಕಾಸು ಆಯೋಗದ ವೆಚ್ಚಗಳನ್ನು ಪ್ರಿಯಾ ಸಾಫ್ಟ್ (PRIA SOFT) ಮೂಲಕ ಮಾಡಲಾಗುತ್ತಿದೆಯೇ?<br>(ಗರಿಷ್ಠ ಅಂಕಗಳು-2) | ಹೌದಾದಲ್ಲಿ-2<br><br>ಇಲ್ಲವಾದಲ್ಲಿ-0 |

| | | |
|---|---|---|
| 56 | 2018-19ನೇ ಸಾಲಿನ ಆರ್ಥಿಕ ವ್ಯವಹಾರಗಳನ್ನು ಪಂಚತಂತ್ರದಲ್ಲಿ ಮುಕ್ತಾಯಗೊಳಿಸುವ ಪ್ರಕ್ರಿಯೆಗಳನ್ನು (Closure of Financial year) ಮೇ ತಿಂಗಳ ಅಂತ್ಯದೊಳಗೆ ಪೂರ್ಣಗೊಳಿಸಲಾಗಿದೆಯೇ?<br>(ಗರಿಷ್ಠ ಅಂಕಗಳು-1) | ಹೌದಾದಲ್ಲಿ-1<br>ಇಲ್ಲವಾದಲ್ಲಿ-0 |
| **ಗ್ರಾಮ ಪಂಚಾಯತಿ ವ್ಯಾತಿಯ ಆಸ್ತಿಗಳ ನಿರ್ವಹಣೆ (6 ಅಂಕಗಳು)** | | |
| 57 | ಗ್ರಾಮ ಪಂಚಾಯತಿಯ ವ್ಯಾಪ್ತಿಯ ಆಸ್ತಿಗಳ ಮತ್ತು ಕಟ್ಟಡಗಳ ವಿವರಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡಲಾಗಿದೆಯೇ?<br>(ಗರಿಷ್ಠ ಅಂಕಗಳು-2) | ಹೌದಾದಲ್ಲಿ-2<br>ಇಲ್ಲವಾದಲ್ಲಿ-0 |
| 58 | ಗ್ರಾಮ ಪಂಚಾಯತಿ ಆಸ್ತಿಯ ವ್ಯವಹರಣೆಗಳನ್ನು ಇ-ಸ್ವತ್ತು ತಂತ್ರಾಂಶದ ಮೂಲಕ ನಡೆಸಲಾಗುತ್ತಿದೆಯೇ?<br>(ಗರಿಷ್ಠ ಅಂಕಗಳು-2) | ಹೌದಾದಲ್ಲಿ-2<br>ಇಲ್ಲವಾದಲ್ಲಿ-0 |
| 59 | ಗ್ರಾಮ ಪಂಚಾಯತಿ ಆಸ್ತಿ, ಹಣಕಾಸು, ದಾಸ್ತಾನು, ಸಿಬ್ಬಂದಿಗಳ ನಿರ್ವಹಣೆಗೆ ನಿಗಧಿಪಡಿಸಿದ ವಹಿಗಳನ್ನು ನಿರ್ವಹಿಸಲಾಗುತ್ತಿದೆಯೇ?<br>(ಗರಿಷ್ಠ ಅಂಕಗಳು-2) | ಹೌದಾದಲ್ಲಿ-2<br>ಇಲ್ಲವಾದಲ್ಲಿ-0 |
| **ಗ್ರಾಮ ಪಂಚಾಯತಿಯ ಸಿಬ್ಬಂದಿ ವಿಷಯಗಳ ನಿರ್ವಹಣೆ (5 ಅಂಕಗಳು)** | | |
| 60 | ಗ್ರಾಮ ಪಂಚಾಯತಿಯ ಅಧಿಕಾರಿಗಳ ಮತ್ತು ಸಿಬ್ಬಂದಿಗಳ ಬಯೋಮೆಟ್ರಿಕ್ ಹಾಜರಾತಿಯನ್ನು (ಇ-ಹಾಜರಾತಿ) ನಿರ್ವಹಿಸಲಾಗಿದೆಯೇ?<br>(ಗರಿಷ್ಠ ಅಂಕಗಳು-1) | ಹೌದಾದಲ್ಲಿ-1<br>ಇಲ್ಲವಾದಲ್ಲಿ-0 |
| 61 | ಸರ್ಕಾರದ ಆದೇಶದ ಅನುಸಾರ ಗ್ರಾಮ ಪಂಚಾಯತಿಯ ನೌಕರರ ಸೇವಾ ಪುಸ್ತಕವನ್ನು ನಿರ್ವಹಣೆ ಮಾಡುತ್ತಿದೆಯೇ?<br>(ಗರಿಷ್ಠ ಅಂಕಗಳು-1) | ಹೌದಾದಲ್ಲಿ-1<br>ಇಲ್ಲವಾದಲ್ಲಿ-0 |

| | | |
|---|---|---|
| 62 | ಗ್ರಾಮ ಪಂಚಾಯತಿಯ ಎಲ್ಲಾ ನೌಕರರಿಗೆ ಕನಿಷ್ಠ ವೇತನ ಕಾಯ್ದೆಯ ಅನುಸಾರವಾಗಿ ನಿಯಮಿತವಾಗಿ ವೇತನ ಮತ್ತು ಭತ್ಯೆಗಳನ್ನು ಪಾವತಿಸಲಾಗುತ್ತಿದೆಯೇ?<br>(ಗರಿಷ್ಠ ಅಂಕಗಳು-1) | ಹೌದಾದಲ್ಲಿ-1<br>ಇಲ್ಲವಾದಲ್ಲಿ-0 |
| 63 | ಗ್ರಾಮ ಪಂಚಾಯತಿಗಳಲ್ಲಿ ಐಪಿ ಆಧಾರಿತ ಸಿಸಿಟಿವಿ ಅಳವಡಿಸಲಾಗಿದೆಯೇ?<br>(ಗರಿಷ್ಠ ಅಂಕಗಳು-1) | ಹೌದಾದಲ್ಲಿ-1<br>ಇಲ್ಲವಾದಲ್ಲಿ-0 |
| 64 | ಸಿಸಿಟಿವಿ ದತ್ತಾಂಶಗಳನ್ನು ಸಂರಕ್ಷಿಸಲಾಗುತ್ತಿದೆಯೇ?<br>(ಗರಿಷ್ಠ ಅಂಕಗಳು-1) | ಹೌದಾದಲ್ಲಿ-1<br>ಇಲ್ಲವಾದಲ್ಲಿ-0 |
| **ಗ್ರಾಮ ಪಂಚಾಯಿತಿಯಲ್ಲಿ ಜಾರಿಗೊಳಿಸಿರುವ ವಿನೂತನ ಪ್ರಯೋಗಗಳು (15- ಅಂಕಗಳು)** | | |
| 65 | ಗ್ರಾಮ ಪಂಚಾಯಿತಿಯಲ್ಲಿ ನಗದು ರಹಿತ ಹಣಕಾಸಿನ ವ್ಯವಹಾರ ಜಾರಿಗೊಳಿಸಲಾಗಿದೆಯೇ?<br>(ಗರಿಷ್ಠ ಅಂಕಗಳು-2) | ಹೌದಾದಲ್ಲಿ-2<br>ಇಲ್ಲವಾದಲ್ಲಿ-0 |
| 66 | ಗ್ರಾಮ ಪಂಚಾಯಿತಿಯಲ್ಲಿ ಸಾರ್ವಜನಿಕ ಕುಂದುಕೊರತೆ ನಿವಾರಣೆಗೆ ಪ್ರತ್ಯೇಕ (ಆನ್‌ಲೈನ್)ವ್ಯವಸ್ಥೆ ಕಲ್ಪಿಸಲಾಗಿದೆಯೇ?<br>(ಗರಿಷ್ಠ ಅಂಕಗಳು-2) | ಹೌದಾದಲ್ಲಿ-2<br>ಇಲ್ಲವಾದಲ್ಲಿ-0 |
| 67 | ಗ್ರಾಮ ಪಂಚಾಯತಿಯ ಸಭೆಗಳನ್ನು ಸ್ಥಳೀಯ ಟಿ.ವಿ ಚಾನಲ್‌ನಲ್ಲಿ ಬಿತ್ತರಿಸಲಾಗುತ್ತಿದೆಯೇ?<br>(ಗರಿಷ್ಠ ಅಂಕಗಳು-2) | ಹೌದಾದಲ್ಲಿ-2<br>ಇಲ್ಲವಾದಲ್ಲಿ-0 |
| 68 | ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಮನೆಗಳಿಗೆ ನಲ್ಲಿ ನೀರು ಸರಬರಾಜು ವ್ಯವಸ್ಥೆ ಇದ್ದಲ್ಲಿ ನೀರಿನ ಮೀಟರ್ ಅಳವಡಿಸಿದೆಯೇ?<br>(ಗರಿಷ್ಠ ಅಂಕಗಳು-2) | ಹೌದಾದಲ್ಲಿ-2<br>ಇಲ್ಲವಾದಲ್ಲಿ-0 |

| | | |
|---|---|---|
| 69 | ಗ್ರಾಮ ಪಂಚಾಯತಿಗಳ ವಿದ್ಯುತ್ ಬಿಲ್ಲುಗಳನ್ನು ಮೀಟರ್ ಜೊತೆ ಮರುಹೊಂದಾಣಿಕೆ ಮಾಡಲಾಗುತ್ತಿದೆಯೇ? (ಗರಿಷ್ಠ ಅಂಕಗಳು-2) | ಹೌದಾದಲ್ಲಿ-2<br>ಇಲ್ಲವಾದಲ್ಲಿ-0 |
| 70 | ಗ್ರಾಮ ಪಂಚಾಯತಿಯು ಸ್ವಂತ ವಿದ್ಯುತ್ ಉತ್ಪಾದನೆಗೆ ಸೋಲಾರ್ ವ್ಯವಸ್ಥೆ ಅಳವಡಿಸಿದೆಯೇ? (ಗರಿಷ್ಠ ಅಂಕಗಳು-2) | ಹೌದಾದಲ್ಲಿ-2<br>ಇಲ್ಲವಾದಲ್ಲಿ-0 |
| 71 | ಗ್ರಾಮ ಪಂಚಾಯತಿಯು ಸಂಪೂರ್ಣ ಸಾಕ್ಷರತೆ ಹೊಂದಿದೆಯೇ? (ಗರಿಷ್ಠ ಅಂಕಗಳು-2) | ಹೌದಾದಲ್ಲಿ-2<br>ಇಲ್ಲವಾದಲ್ಲಿ-0 |
| 72 | ಗ್ರಾಮ ಪಂಚಾಯತಿಯಲ್ಲಿ ಪ್ಲಾಸ್ಟಿಕ್ ನಿಷೇಧ ಜಾರಿಗೊಳಿಸಲಾಗಿದೆಯೇ? (ಗರಿಷ್ಠ ಅಂಕಗಳು-1) | ಹೌದಾದಲ್ಲಿ-1<br>ಇಲ್ಲವಾದಲ್ಲಿ-0 |

**ವಿಭಾಗ-4 ಜೀವನ ಗುಣಮಟ್ಟ**

| ಕ್ರ.ಸಂ | ಮಾನದಂಡಗಳು | ಅಂಕಗಳು |
|---|---|---|
| 73 | 2018-19ನೇ ಸಾಲಿನಲ್ಲಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಲಿಂಗವಾರು ಮಕ್ಕಳ ಜನನ ಪ್ರಮಾಣದಲ್ಲಿ ವ್ಯತ್ಯಾಸವಾಗಿದೆಯೇ? ಈ ಬಗ್ಗೆ ಗ್ರಾಮ ಪಂಚಾಯತಿಯಲ್ಲಿ ಮಾಹಿತಿ ಇದೆಯೇ? | ಇದ್ದಲ್ಲಿ -1 ಅಂಕ<br>ಇಲ್ಲವಾದಲ್ಲಿ-0ಅಂಕ |
| 74 | ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಎಷ್ಟು ಮಕ್ಕಳು ಒಂದು ವರ್ಷ ತುಂಬುವ ಮೊದಲೇ ಮರಣ ಹೊಂದಿವೆ? ಈ ಬಗ್ಗೆ ಗ್ರಾಮ ಪಂಚಾಯತಿಯಲ್ಲಿ ಮಾಹಿತಿ ಇದೆಯೇ? | ಇದ್ದಲ್ಲಿ -1 ಅಂಕ<br>ಇಲ್ಲವಾದಲ್ಲಿ-0ಅಂಕ |
| 75 | ಗ್ರಾಮದಲ್ಲಿ 2018-19ನೇ ಸಾಲಿನಲ್ಲಿ 0-5 ವರ್ಷದೊಳಗಿನ ಎಷ್ಟು ಮಕ್ಕಳು ಮೃತಪಟ್ಟಿದ್ದಾರೆ? ಈ ಬಗ್ಗೆ ಗ್ರಾಮ ಪಂಚಾಯತಿಯಲ್ಲಿ ಮಾಹಿತಿ ಇದೆಯೇ? | ಇದ್ದಲ್ಲಿ -1 ಅಂಕ<br>ಇಲ್ಲವಾದಲ್ಲಿ-0ಅಂಕ |

| | | |
|---|---|---|
| 76 | ಗ್ರಾಮದಲ್ಲಿ 0-5 ವರ್ಷ ವಯಸ್ಸಿನ ಎಷ್ಟು ಮಕ್ಕಳು ಸಂಪೂರ್ಣ ರೋಗನಿರೋಧಕ ಲಸಿಕೆಯನ್ನು ಪಡೆದಿದ್ದಾರೆ? ಈ ಬಗ್ಗೆ ಗ್ರಾಮ ಪಂಚಾಯತಿಯಲ್ಲಿ ಮಾಹಿತಿ ಇದೆಯೇ? | ಇದ್ದಲ್ಲಿ -1 ಅಂಕ<br>ಇಲ್ಲವಾದಲ್ಲಿ-0ಅಂಕ |
| 77 | ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿರುವ ಒಟ್ಟು 0-18 ವಯಸ್ಸಿನ ಅಂಗವಿಕಲ ಮಕ್ಕಳೆಷ್ಟು? ಈ ಬಗ್ಗೆ ಗ್ರಾಮ ಪಂಚಾಯತಿಯಲ್ಲಿ ಮಾಹಿತಿ ಇದೆಯೇ? | ಇದ್ದಲ್ಲಿ -1 ಅಂಕ<br>ಇಲ್ಲವಾದಲ್ಲಿ-0ಅಂಕ |
| 78 | ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಯಾವುದಾದರೂ ಬಾಲ್ಯವಿವಾಹಗಳು ನಡೆದಿದೆಯೇ? ಬಾಲ್ಯ ವಿವಾಹ ತಡೆಗಟ್ಟಲು ಗ್ರಾಮ ಪಂಚಾಯತಿಯಿಂದ ಕ್ರಮ ಆಗಿದೆಯೇ? | ಆಗಿದ್ದಲ್ಲಿ- 1 ಅಂಕ<br>ಇಲ್ಲವಾದಲ್ಲಿ- 0 ಅಂಕ |
| 79 | ಗ್ರಾಮ ಪಂಚಾಯತಿಯಲ್ಲಿ ಒಟ್ಟಾರೆಯಾಗಿ, 0-5 ವರ್ಷ ವಯಸ್ಸಿನ ಎಷ್ಟು ಮಕ್ಕಳು ಅಂಗನವಾಡಿಗೆ ದಾಖಲಾಗಿದ್ದಾರೆ? ದಾಖಲಾಗದ ಮಕ್ಕಳನ್ನು ಅಂಗನವಾಡಿಗೆ ಸೇರಿಸಲು ಗ್ರಾಮ ಪಂಚಾಯತಿ ವತಿಯಿಂದ ಕ್ರಮ ತೆಗೆದುಕೊಳ್ಳಲಾಗಿದೆಯೇ? | ಆಗಿದ್ದಲ್ಲಿ- 1 ಅಂಕ<br>ಇಲ್ಲವಾದಲ್ಲಿ- 0 ಅಂಕ |
| 80 | ಒಟ್ಟಾರೆಯಾಗಿ, 2018-19ನೇ ಸಾಲಿನಲ್ಲಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ 6-14 ವಯಸ್ಸಿನ ಶಾಲೆಗೆ ದಾಖಲಾಗದ ಎಷ್ಟು ಮಕ್ಕಳಿದ್ದಾರೆ? ಇವರನ್ನು ಶಾಲೆಗೆ ದಾಖಲಿಸಲು ಗ್ರಾಮ ಪಂಚಾಯತಿ ವತಿಯಿಂದ ಕ್ರಮ ಆಗಿದೆಯೇ? | ಆಗಿದ್ದಲ್ಲಿ- 1 ಅಂಕ<br>ಇಲ್ಲವಾದಲ್ಲಿ- 0 ಅಂಕ |

**ಗ್ರಾಮ ಪಂಚಾಯತಿಯು ಯಾವುದಾದರೂ ವಿಶೇಷ ವಿಧಾನಗಳನ್ನು (innovative programmes) ಅಳವಡಿಸಿಕೊಂಡಿದ್ದರೆ, ಅದನ್ನು ತೋರ್ಪಡಿಸಲು ಇಚ್ಛಿಸಿದಲ್ಲಿ, ಅದರ ಕುರಿತು 250-300 ಪದಗಳಲ್ಲಿ ಟಿಪ್ಪಣಿ ಬರೆಯಿರಿ. ದಯವಿಟ್ಟು ಫೋಟೋಗಳನ್ನು ಲಗತ್ತಿಸಿ.**